ಸಂಶೋಧನೆಯ ಮುಂದಿನ ಭಾಗವನ್ನು ನಿರ್ವಹಿಸುವ ಮೊದಲು ಇದೊಂದು ಜೀವವಿಲ್ಲದ ಯಂತ್ರ ಮಾತ್ರ ಎಂಬುದನ್ನು ನಿನಗೆ ಮನದಟ್ಟು ಮಾಡಿಸುವುದು ನನ್ನ ಕರ್ತವ್ಯ... ನೋಡು ಇಲ್ಲಿ...” ಎಂದು ರೋಬೋದ ಕಾಲುಗಳ ಬಳಿ ಹೋಗಿ ತೆರೆಯಲಾಗಿದ್ದ ಬಲ ಅಂಗಾಲನ್ನು ತೋರಿಸಿದರು. ಅದರೊಳಗೆ ಸ್ಟೀಲಿನ ರಾಡುಗಳು, ಹೆಣೆಯಲಾಗಿದ್ದ ಸ್ಟೀಲಿನ ವೈರುಗಳು ನಿಚ್ಚಳವಾಗಿ ಕಾಣಿಸಿ ನಾನು ದೊಡ್ಡದೊಂದು ನಿಟ್ಟುಸಿರು ಬಿಟ್ಟೆ. ನನಗೆ ಬಹಳ ಬೇಸರವಾಗಿತ್ತು.

ಪ್ರೊಫೆಸರರು ಕೊಠಡಿಯಿಂದ ಹೊರಬಂದರು. ನಾನು ಅವರನ್ನು ಹಿಂಬಾಲಿಸಿದೆ. ಇಬ್ಬರೂ ಮತ್ತೆ ಕುರ್ಚಿಗಳ ಮೇಲೆ ಕುಳಿತೆವು. “ಇದು ಕೇವಲ ಒಂದು ಯಂತ್ರ ಎಂಬುದನ್ನು ನೀನು ಎಂದೂ ಮರೆಯಬಾರದು...” ಎಂದರು. ನಾನು ಏನೂ ಮಾತನಾಡಲಿಲ್ಲ. ತುಸು ಹೊತ್ತು ಇಬ್ಬರೂ ಮೌನ ವಹಿಸಿದೆವು.

“ಸರಿ ವಿಶಾಲ್... ನೀವು ರೋಬೋವನ್ನು ನಿಮಗೆ ಅನುಕೂಲವಾದ ದಿನ ತೆಗೆದುಕೊಂಡು ಹೋಗಬಹುದು...” ಎಂದು ಕ್ಷೀಣದನಿಯಿಂದ ನುಡಿದರು. ನಾನು ಯೋಚನಾಮಗ್ನನಾದೆ. ನಾನು ಮುಂಬೈಯಿಂದ ಬೆಂಗಳೂರಿಗೆ ಬಂದು ನಮ್ಮ ಕಾರ್ಖಾನೆಯ ಮುಖ್ಯಸ್ಥನಾಗಿ ಕೆಲಸ ಮಾಡಲು ಆರಂಭಿಸಿದಂದಿನಿಂದ ಒಂದು ದಿನವೂ ರಜೆ ಹಾಕಿರಲಿಲ್ಲ. ನಾಳೆ ಒಂದು ದಿನ ರಜೆ ಹಾಕಿ ರೋಬೋವನ್ನು ಫ್ಲ್ಯಾಟಿಗೆ ತೆಗೆದುಕೊಂಡು ಹೋಗೋಣವೆಂದು ನಿರ್ಧರಿಸಿದೆ.

“ನಾಳೆಯೇ ಆಗಬಹುದಾ ಸರ್...” ಎಂದೆ.

